# Mobile Command Centre for Hubballi Police

**Vijayavani | 06 January 2018**

# ಹುಬ್ಬಳ್ಳಿ ಪೊಲೀಸ್‌ಗೆ ಮೊಬೈಲ್ ಕಮಾಂಡ್ ಸೆಂಟರ್

## ಬೆಂಗಳೂರು ಬಳಿಕ ಹುಬ್ಬಳ್ಳಿಗೆ ಬಂದಿದೆ ಹೊಸ ಅಸ್ತ್ರ | ಒಂದು ಕಿಮೀ ವ್ಯಾಪ್ತಿಯ ವಿಡಿಯೋ ರೆಕಾರ್ಡ್ ಸಾಮರ್ಥ್ಯ

• **ವಿಶೇಷ ವರದಿ** ಹುಬ್ಬಳ್ಳಿ

ಯಾವುದೇ ರೀತಿಯ ವಿಪತ್ತು, ಬಂದ್, ಪ್ರತಿಭಟನೆ ಹಾಗೂ ರ್‍ಯಾಲಿಗಳು ನಡೆದ ಸಂದರ್ಭದಲ್ಲಿ ನಡೆಯುವ ಚಟುವಟಿಕೆಗಳ ಸಂಪೂರ್ಣ ವಿಡಿಯೋ ಚಿತ್ರೀಕರಣ ಮಾಡಲು ಪೊಲೀಸ್ ಇಲಾಖೆ ಈಗ ಸಿದ್ಧವಾಗಿದೆ. ರಾಜ್ಯದ ರಾಜ್ಯಧಾನಿ ಬೆಂಗಳೂರಿನ ಬಳಿಕ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್‌ಗೆ ಈ ಸೇವೆ ಒದಗಿಸುವ ಅತ್ಯಾಧುನಿಕ ತಂತ್ರಜ್ಞಾನವುಳ್ಳ 'ಮೊಬೈಲ್ ಕಮಾಂಡ್ ಸೆಂಟರ್' ಅನ್ನು ಸರ್ಕಾರ ನೀಡಿದೆ.

ಕಾನೂನು ಸುವ್ಯವಸ್ಥೆ ಕಾಪಾಡುವ ಸೇನೆ ಮತ್ತು ಪೊಲೀಸರಿಗೆ ಸೂಕ್ತವಾಗಿರುವ ಈ ವಾಹನ ಪೊಲೀಸರ ಆಪ್ತ ಬಾಂಧವ ಎಂದು ಹೇಳಬಹುದು. ಪ್ರತಿಭಟನೆ, ರ್‍ಯಾಲಿಯಂತಹ ಕಾರ್ಯಕ್ರಮಗಳು ನಡೆದಾಗ ನಡೆಯುವ ಅಕ್ರಮ ಚಟುವಟಿಕೆಗಳಿಗೆ ಕಾರಣರಾದ ದುಷ್ಕರ್ಮಿಗಳನ್ನು ಈ ವಾಹನ ತಕ್ಷಣವೇ ಗುರುತಿಸಲಿದೆ.

**ರಾಜ್ಯದಲ್ಲಿ ಎರಡನೇ ವಾಹನ:** ಇಷ್ಟು ತಂತ್ರಜ್ಞಾನ ಹೊಂದಿರುವ ವಾಹನ ಲಭ್ಯವಿರುವ ಎರಡನೇ ನಗರ ಎಂಬ ಖ್ಯಾತಿಗೆ ವಾಣಿಜ್ಯ ನಗರ ಹುಬ್ಬಳ್ಳಿ ಪಾತ್ರವಾಗಿದೆ. ಈಗ್ಗೆ ನಾಲ್ಕು ವರ್ಷಗಳ ಹಿಂದೆ ರಾಜಧಾನಿ ಬೆಂಗಳೂರಿಗೆ ಇಂತಹ ವಾಹನ ನೀಡಲಾಗಿದೆ. ಇನ್ನು ಶೀಘ್ರದಲ್ಲೇ ಮೈಸೂರು ಸಹ ಈ ವಾಹನವನ್ನು ಪಡೆಯಲಿದೆ ಎಂದು ತಿಳಿದುಬಂದಿದೆ.

**ಡ್ರೋಣ್ ಕ್ಯಾಮೆರಾ:** ವಾಹನದೊಂದಿಗೆ ಡ್ರೋಣ್ ಕ್ಯಾಮೆರಾ ಸಹ ಇದ್ದು, ಇದು ಚಿತ್ರೀಕರಿಸುವ ಎಲ್ಲ ವಿವರಗಳು ಸಂಪೂರ್ಣವಾಗಿ ವಾಹನದಲ್ಲಿ ಸಂಗ್ರಹವಾಗಲಿದೆ. ಈ ಡ್ರೋಣ್ ಕ್ಯಾಮೆರಾ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದು, ಅದು ಸಂಗ್ರಹಿಸುವ ವಿಡಿಯೋ ನೇರವಾಗಿ ಮೊಬೈಲ್ ಕಮಾಂಡ್ ಸೆಂಟರ್‌ನಲ್ಲಿ ಸಂಗ್ರಹವಾಗಲಿದೆ.




**ಹು-ಧಾರವಾಡ ಪೊಲೀಸ್ ಕಮಿಷನರೇಟ್‌ಗೆ ದೊರಕಿದೆ ಮೊಬೈಲ್ ಕಮಾಂಡ್ ಸೆಂಟರ್.**

**ವಾಹನದಲ್ಲಿ ಏನೇನಿದೆ:** ವಾಹನದ ಸುತ್ತ ನಾಲ್ಕು ಸಿಸಿ ಕ್ಯಾಮೆರಾಗಳಿದ್ದು ಘಟನಾವಳಿಗಳನ್ನು ಮೈಯೆಲ್ಲಾ ಕಣ್ಣಾಗಿ ನೋಡಿ ದಾಖಲಿಸಿಕೊಳ್ಳಲಿವೆ. ವಾಹನದ ಮೇಲೆ ಒಂದು ಹೈ ಮಾಸ್ಟ್ ದೀಪವಿದ್ದು, ಈ ದೀಪ ರಾತ್ರಿ ಕಾರ್ಯಾಚರಣೆಗೆ ಅತ್ಯುತ್ತಮವಾದ ಎಲ್ ಇಡಿ ಲೈಟ್‌ಗಳನ್ನು ಹೊಂದಿದೆ. ಇದರಿಂದ ರಾತ್ರಿ ವೇಳೆ ಚಿತ್ರೀಕರಣ ಮಾಡಲು ಅನುಕೂಲ ಕಲ್ಪಿಸಲಿದೆ. ಪ್ಯಾನ್‌ಫಿಲ್ಟ್ ಜೂಮ್ ಕ್ಯಾಮೆರಾವನ್ನು ಸಹ ವಾಹನ ಹೊಂದಿದ್ದು, ಒಂದು ಕಿಮೀ ದೂರದ ಎಲ್ಲ ದೃಶ್ಯಗಳು ಸಂಪೂರ್ಣ ಸೆರೆಯಾಗಲಿವೆ. ಹೈಮಾಸ್ಟ್ ಎಚ್‌ಡಿ ಕ್ಯಾಮೆರಾ ಹೊಂದಿದ್ದು, ರೇಡಿಯೋ ಮತ್ತು ಜಿಸಿಎಂಗೆ ವೈಯರ್‌ಲೆಸ್ ಸಂಯೋಜಿತ ಸಂವಹನ ವ್ಯವಸ್ಥೆಯನ್ನು ವಾಹನ ಒಳಗೊಂಡಿದೆ. ಪರಿಸ್ಥಿತಿಯ ಬಗ್ಗೆ ಸೆಟ್‌ಲೈಟ್ ಮೂಲಕ ಟಿವಿ ಹಾಗೂ ಮೊಬೈಲ್ ಮೂಲಕ ಸಂಪೂರ್ಣ ವಿವರ ನೀಡಲಿದೆ.

### ಅನುಕೂಲತೆಗಳು ಏನು?



- ಕಡಿಮೆ ಅವಧಿಯಲ್ಲಿ ವೈರ್‌ಲೆಸ್ ಸಂವೇದಕಗಳೊಂದಿಗೆ ತ್ವರಿತವಾಗಿ ಒಂದು ಘಟನೆಯನ್ನು ಸಂಪೂರ್ಣವಾಗಿ ಕವರ್ ಮಾಡಬಹುದು.
- ರಾಡರ್, ಥರ್ಮಲ್ ಕ್ಯಾಮೆರಾ ಸೇರಿ ಅತ್ಯಾಧುನಿಕ ಸಾಧನಗಳೊಂದಿಗೆ ವ್ಯವಸ್ಥಿತ ಕಾರ್ಯನಿರ್ವಹಣೆ
- ಕನಿಷ್ಠ ತರಬೇತಿಯೊಂದಿಗೆ ಕಣ್ಗಾವಲು ಸಿಬ್ಬಂದಿ ಈ ವಾಹನದ ಮೂಲಸೌಕರ್ಯ ಬಳಸಬಹುದು.
- ಮೊಬೈಲ್ ಕಮಾಂಡ್ ಸೆಂಟರ್ ಸಂಗ್ರಹಿಸಿದ ವಿಡಿಯೋ, ಸೆನ್ಸಾರ್ ಡಾಟಾವನ್ನು ವೈಯರ್‌ಲೆಸ್ ಮೂಲಕ ಸ್ವೀಕರಿಸಬಹುದು.

### ದುಷ್ಕರ್ಮಿಗಳೇ ಎಚ್ಚರ!

ಯಾವುದೇ ರ್‍ಯಾಲಿ, ಪ್ರತಿಭಟನೆಯಂತಹ ಸಂದರ್ಭಗಳಲ್ಲಿ ದುಷ್ಕೃತ್ಯಕ್ಕೆ ಕೈಹಾಕುವವರು ಇನ್ನು ಎಚ್ಚರದಿಂದ ಇರಬೇಕಾಗಿದೆ. ಕಾರಣ, ಘಟನಾವಳಿಯ ಸಂದರ್ಭ ಈ ವಾಹ ಬಂದು ನಂತರ ಇದರ ಸುತ್ತ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ಸ್ಪಷ್ಟವಾಗಿ ಚಿತ್ರೀಕರಣ ಮಾಡಲಿದೆ. ಹೀಗಾಗಿ, ಇಂತಹ ಘಟನಾವಳಿಗಳಲ್ಲಿ ಅಹಿತಕರ ಘಟನೆಗೆ ಕಾರಣವಾಗುವ ವ್ಯಕ್ತಿಯನ್ನು ಇನ್ನು ಪೊಲೀಸರು ಸುಲಭವಾಗಿ ಪತ್ತೆ ಹಚ್ಚಲು ಸಾಧ್ಯವಾಗುತ್ತದೆ.

### ವಾಹನಕ್ಕೆ ಎಷ್ಟು ಸಿಂಬ್ಬದಿ

ಮಿಸ್ಟ್ರಲ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ಮಿಸಿರುವ ಈ ವಾಹನಕ್ಕೆ ಒಬ್ಬ ಚಾಲಕ ಸೇರಿ ಒಟ್ಟು ಐವರು ಸಿಬ್ಬಂದಿ ಅಗತ್ಯವಿದೆ. ಇಬ್ಬರು ತಂತ್ರಜ್ಞರು ಇದರಲ್ಲಿ ಕಾರ್ಯನಿರ್ವಹಿಸಿದರೆ, ಇನ್ನಿಬ್ಬರು ಅವರಿಗೆ ನಿರಂತರವಾಗಿ ಸಹಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ.